ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

Annual Report of Karnataka State Pollution Control Board for the year 1988-89 as required under Section 39 (2) of the (Prevention and Control of Pollution) Act, 1974.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

Annual Report of Karnataka Sheep and Sheep Products Development Board for the year 1988-89 as required under Section 24 of the Karnataka Sheep and Sheep Products Development Act, 1973.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಟಿ. ಎನ್. ನರಸಿಂಹಮೂರ್ತಿ (ವಿಜಾಪುರ ನಗರ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ ಅವರ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1. Audit Report of Urban Development Authority, Bijapur for the year 1987-88-as required under Section 48(5) of Karnataka Urban Development Authority, 1987.

2. Annual Report of Karnataka Inland Fisheries Development Corporation for the year 1989-90 as required under Section 619(A) of the Companies Act, 1956.

3. Progress report of Karnataka Fisheries Development Corporation for the year 1989-90 as required under Section 619(A) of the Companies Act, 1956.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಎಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿ) ಅವರ ಹೆಸರಿನ ಮುಂದಿರುವ ಕೆಳಕಂಡ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1. Order No. CG CMW 42 CLM 90(1) dated 18-4-1990 Regarding amendment to order No. CMW 333 CLS 88 dated 21st June, 1989, exempt the PRADESHIKA ENNEBEEJA BELEGARARA SAHAKARI SANGHAGALA OKKUTA (NIYAMITHA),

2. Order No. CMW 42 CLM 90(2) dated 18-4-1990 Regarding Amendment to Order No. CMW 333 CLS 88 dated 21st June, 1989, exempt the PRADESHIKA ENNEBEEJA BELEGARARA SAHAKARI SANGHAGALA OKKUTA (NIYAMITHA).

3. Order No. CMW 42 CLM 90(3) dated 18-4-1990 Regarding Amendment to Order No. CMW 333 CLS 88 dated 21st June, 1989, exempt the PRADESHIKA ENNEBEEJA BELEGARARA SAHAKARI SANGHAGALA OKKUTA (NIYAMITHA),

4 ORDER No. SAMUTA 9 SAKAVI 90 dated 21-3-1990 Amendment to Schedule 30-A regarding Primary Co-operative Agriculture and Rural Development Bank Limited, Turuvekere, as required under Section 130 of the Karnataka Co-operative Societies Act, 1989.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದಿಡಲಾಯಿತು.

ರೈತರ ಸಾಲ ಮನ್ನಾ ಮಾಡುವ ಬಗ್ಗೆ

† ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದ ಮೇಲೆ ಏನು ಕೇಂದ್ರ ಸರ್ಕಾರ ಏನು ಒಂದು ಸ್ಕೀಮನ್ನು ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕಳಿಸಿಕೊಟ್ಟಿದೆ. ಅದರಿಂದ ರಾಜ್ಯಕ್ಕೆ ಉಪಯೋಗವಾಗುತ್ತಿಲ್ಲ ಎಂಬ ಬಗ್ಗೆ ಚರ್ಚೆ ಆದ ಮೇಲೆ ಸನ್ಮಾನ್ಯ ವೀರೇಂದ್ರ ಪಾಟೀಲ ಅವರು ಮತ್ತು ಕೆಲವರು ಸೇರಿ ಮಾತನಾಡಿದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಪ್ರಸ್ತಾಪ ಮಾಡಿದರೆ ಒಳ್ಳೆಯದು. ಅವರು ಡೆಲ್ಲಿಗೆ ಹೋಗಿ ಬಂದ ಮೇಲೆ ಹೊಸ ವಿಷಯಗಳು ಗೊತ್ತಾಗಬಹುದು ಎಂದು ಹೇಳಿದ್ದರು. ಈ ಸ್ಕೀಮನ್ನು ನಮ್ಮ ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾರ್ಪಾಡು ಮಾಡಬೇಕಾದರೆ ಯಾವ ರೀತಿ ಮಾಡಬಹುದು ಎಂಬುದರ ಬಗ್ಗೆ ಚರ್ಚೆ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ. ಅದರ ಮೇಲೆ ನಾವು ಧರಣಿಯನ್ನು ನಿಲ್ಲಿಸಿ ವಾಪಸ್ಸು ಬಂದಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ತಾವು ಯಾವರೀತಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಮಾಡಿಕೊಡಿ. ದಯವಾಡಿ ಈ ಸ್ಕೀಮ್‌ನಿಂದ ರಾಜ್ಯದ ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ಒಂದು ಯೋಜನೆ ತಯಾರು ಮಾಡಿ ಕಳಿಸಿದರೆ ನಾವು ರೈತರ ನೆರವಿಗೆ ಬಂದಂತಾಗುತ್ತದೆ. ಅದನ್ನು ಕಳಿಸಿಕೊಡುವುದಕ್ಕೆ ಕೆಲವು ಮಾಹಿತಿಗಳು ಏನು ನನ್ನಲ್ಲಿವೆ, ಅದನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇದರ ಮೂಲಕ ರಾಜ್ಯದ ರೈತರಿಗೆ ಅನುಕೂಲವಾಗುತ್ತದೆ. ಅದಕ್ಕೋಸ್ಕರ ಇದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಅದು ಆಗದಿದ್ದರೆ ೨೪ ಗಂಟೆಗಳ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇದಕ್ಕೆ ನಿಶ್ಚಿತವಾದ ಒಂದು ಸಮಯವನ್ನು ನಿಗದಿಪಡಿಸಿ ಈ ಸ್ಕೀಮ್ ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವ ರೀತಿ ಮಾಡಬಹುದು ಎಂದು ನೋಡಬೇಕು. ಏಕೆಂದರೆ ತಮಗೆ ಗೊತ್ತಿರುವ ಹಾಗೆ ಈಗಿರುವಂಥ ಕೇಂದ್ರ ಸರ್ಕಾರದ ಸ್ಕೀಮನ್ನು ಅಂದರೆ ಅವರು ಮಾಡಿರುವಂತಹ ಆದೇಶವನ್ನು ಮಾರ್ಪಾಡು ಮಾಡುವುದಕ್ಕೆ ಅವಕಾಶ ಇದೆ. ಒಂದು ಮಾತನ್ನು ಸ್ಪಷ್ಟವಾಗಿ ಏನು ಹೇಳಿದ್ದಾರೆಂದರೆ.— 'In sofar as Banks in co-operative sector are concerned a scheme on similar pattern may be framed and put in operation by the State Government.' 'may be' ಶಬ್ದವನ್ನು ಉಪಯೋಗಿಸಿರುವುದರಿಂದ ಅದನ್ನು ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ಈ ಸ್ಕೀಮ್‌ನ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಣಿವಾರು ಪದ್ಧತಿ ಏನು ನಮ್ಮ ರಾಜ್ಯದಲ್ಲಿ ಎಲ್ಲೂ ಪ್ರಾಣಿ ಬಿಡಿಯುವ ಸಂದರ್ಭದಲ್ಲಿ 'ಅಣಿವಾರಿ' ಎಂದು ಎಲ್ಲಿಯೂ ಬರೆದಿಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ಬರಗಾಲಕ್ಕೆ ತುತ್ತಾದ ರೈತರಿಗೆ. ಅವರು ನಿರ್ಗತಿಕರಾಗಿರುವ ಸಂದರ್ಭದಲ್ಲಿ ದಯವಿಟ್ಟು ರಾಜ್ಯದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಸ್ಕೀಮ್‌ನ್ನು ಮಾಡಿಕಳಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಮುಂದೆ ಬರಬೇಕು. ಅದು ಯಾವ ರೀತಿ ಇರಬೇಕು ಎಂದು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗಿ ಬಂದಿರಬೇಕಾದರೆ ಬೇರೆ ಬೇರೆ ರಾಜ್ಯ ಸರ್ಕಾರಗಳು ಯಾವ ರೀತಿ ಸ್ಕೀಮುಗಳನ್ನು ಮಾಡಿವೆ, ಯಾವ ರೀತಿಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿವೆ ಎಂಬುದನ್ನು ದಯವಿಟ್ಟು ತಿಳಿಸಿದರೆ, ಆದರ ಬಗ್ಗೆ ಬಿಳಕು ಚೆಲ್ಲಿದರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಲಹೆ ಕೊಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಮತ್ತು ರೈತರಿಗೆ ಅನುಕೂಲ ಮಾಡುವುದಕ್ಕೆ ಸಹಾಯ ಮಾಡಿದಂತಾಗುತ್ತದೆ ಎಂದು ಹೇಳಿ ಚರ್ಚೆ ಮಾತಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ವಿನಂತಿಮಾಡಿಕೊಳ್ಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.